ಹೋಗ್ದೇ ಬೇರೆ ದಾರೀನೇ ಇಲ್ಲ ನನ್ಗೆ. ಹೋಗ್ದಿದ್ರೆ ನಾನು ಸಹಕರಿಸ್ತಿಲ್ಲ ಅಂತ ಬಂಧಿಸ್ತಾರೆ. ಯಾವ ಸಮಯದಲ್ಲಾದ್ರೂ ಒಳಗೆ ಹಾಕೋಕೆ ಅರ್ಹನಾದವ್ನು ನಾನು. ಅದೇ ನನ್ನ ಸ್ಥಿತಿ. ತಕರಾರೇನೂ ಇಲ್ಲ ನಂದು. ಅವ್ರು ಹೋಗು ಅಂತ ಹೇಳ್ತಾರೆ, ನಾನು ಹೋಗ್ತೇನೆ.

ನನ್ನತ್ರ ಕಾಗದಪತ್ರ ಯಾಕಿಲ್ಲ? ನನ್ನ ನಿರ್ಲಕ್ಷ್ಯಕ್ಕೆ ನನಗೇ ನಗು ಬರ್ತದೆ. ಮತ್ತೆ ನನ್ನ ಅದೃಷ್ಟ ಕೂಡ ಒಳ್ಳೇದಲ್ಲ.

ಘಾ–ದಲ್ಲಿದ್ದಾಗ ಹೆಂಗಸರನ್ನ ಕೊಚ್ಚಿಹಾಕೋದರ ವಿರುದ್ಧ ಒಂದಷ್ಟು ಕ್ರಿಶ್ಚಿಯನ್ ಕೆಲ್ಸ ಮಾಡ್ತಿದ್ದೆ ಅಂತ ನನ್ನನ್ನ ಕೊಲ್ಲೋಕೆ ಬಯಸಿದ್ರು. ನಾನು ಅವ್ರ ಕಣ್ಣಿಗೆ ಬೀಳ್ದೆ ಅಡಗಿಕೊಂಡಿದ್ದೆ. ಅಲ್ಲೊಬ್ಬ ಇಂಗ್ಲಿಷ್ ಮನುಷ್ಯ–ಬರ್ನಾರ್ಡ್ ಅಂತ–ನನ್ಗೆ ಸಹಾಯ ಮಾಡಿದ್ದ. ನಾನು ಕೆಲ್ಸ ಮಾಡ್ತಿದ್ದ ಕ್ರಿಶ್ಚಿಯನ್ ಎನ್.ಜಿ.ಓ.ದಲ್ಲೇ ಅವ್ನೂ ಕೆಲ್ಸ ಮಾಡ್ತಿದ್ದ. ನನ್ನ ಜೀವ ಅಪಾಯದಲ್ಲಿರೋದು ಅವ್ನಿಗೆ ತಿಳಿದಿತ್ತು. ಯಾಕೆಂದ್ರೆ ನನ್ನನ್ನು ಹುಡುಕ್ತಾ ಇದ್ದ ಜನರು ನನ್ನ ಕೇಳ್ಕೊಂಡು ತುಂಬಾ ಸಲ ಆಫೀಸಿಗೆ ಬಂದಿದ್ರು. ನಾನು ಅಲ್ಲಿಂದ ಓಡೋದಕ್ಕೆ ತುದಿಗಾಲಲ್ಲಿ ನಿಂತಿದ್ದೆ. ಆಗ್ಲೇ ಈ ಇಂಗ್ಲಿಷ್ ಗೆಳೆಯ ಬರ್ನಾರ್ಡ್ ಇಲ್ಲಿ ಬರೋದಕ್ಕೆ ಸಲಹೆ ಕೊಟ್ಟಿದ್ದು. ಅವ್ನೇ ನನ್ನ ಪಾಸ್‌ಪೋರ್ಟ್ ತಗೊಂಡ್ಹೋಗಿ ಒಂದು ವಾರದ ನಂತರ ವೀಸಾ ಸ್ಟ್ಯಾಂಪ್ ಮಾಡಿಸಿ ವಾಪಸ್ ಕೊಟ್ಟ. 'ಇದು ಹೇಗೆ ಮಾಡಿಸಿದೆ' ಅಂತ ಕೇಳ್ದೆ ಅವನನ್ನ. ಯಾಕೆಂದ್ರೆ, ವೀಸಾ ಸಿಗೋದೇನೂ ಸುಲಭ ಅಲ್ಲ–ಸಂದರ್ಶನಕ್ಕೆ ಹಾಜರಾಗ್ಬೇಕು, ತುಂಬಾ ಕಾಸು ಕೊಡ್ಬೇಕು, ಮತ್ತೆ ಒಪ್ಪಿಗೆ ಪಡೆಯೋಕೆ ಪಾಸ್‌ಪೋರ್ಟನ್ನ ಮತ್ತೊಂದು ದೇಶಕ್ಕೆ ಕಳಿಸ್ಬೇಕು. ತುಂಬಾ ಸಮಯ ತೆಗೆದುಕೊಳ್ಳದೆ ಅದು. 'ಅದ್ನೆಲ್ಲಾ ಕೇಳ್ಬೇಡ' ಅಂದ, ನಾನೂ ಕೇಳ್ಲಿಲ್ಲ. ಗೆಳೆಯರು ಸಂಬಂಧಿಗಳು ಹೇಗೋ ಪ್ರಯಾಣದ ಖರ್ಚಿಗೆ ಸಹಾಯ ಮಾಡಿದ್ರು. ಬರ್ನಾರ್ಡ್ ಮತ್ತೆ ನಾನು ಲಂಡನ್‌ಗೆ ಒಟ್ಟಿಗೇ ಪ್ರಯಾಣ ಮಾಡಿದ್ವಿ.

ನನಗೋಸ್ಕರ ಆತ ಎಷ್ಟೆಲ್ಲ ಮಾಡಿದ. ಅದ್ಕೆ ಮತ್ತೆ ನನ್ನೊತೆ ಪ್ರಯಾಣ ಮಾಡಿದ್ದಕ್ಕೆ ಅವ್ನಿಗೆ ನಾನು ಕೃತಜ್ಞನಾಗಿದ್ದೆ. ಯುರೋಪಿಗೆ ಅದ್ಕೂ ಮೊದ್ಲು ಪ್ರಯಾಣಿಸಿರ್ಲಿಲ್ಲ. ಅವ್ನು ಪಕ್ಕಕ್ಕೇ ಕೂತಿದ್ದಕ್ಕೆ ಧೈರ್ಯ ಸಿಕ್ತು ನನಗೆ. ವಿಮಾನ ನಿಲ್ದಾಣದಲ್ಲಿ ಅಧಿಕಾರಿಗಳು ಕೆಲವು ಪ್ರಶ್ನೆ ಕೇಳಿದ್ರು. ಯಾಕೆ ಆ ಪ್ರಶ್ನೆ ಕೇಳ್ತಿದ್ದಾರೆ ಅಂತ ಗೊತ್ತಿಲ್ದೆ ನಾನು ಉತ್ತರ ಕೊಟ್ಟೆ. ಸರಿಯಾದ ಉತ್ತರಾನೇ ಕೊಟ್ಟಿರ್ಬೇಕು. ಯಾಕಂದ್ರೆ, ಪ್ರವಾಸಿ ಆಗಿ ಒಳ್ಗೆ ಬರೋದಕ್ಕೆ ಬಿಟ್ರು ಅವ್ರು. ನಾವು ಗೇಟ್ ಹತ್ರ ಬಂದ್ವಿ. ಟರ್ಮಿನಲ್‌ನಲ್ಲಿ ಜನಜಾತ್ರೆ ನಡುವೆ ನನ್ನ ಇಂಗ್ಲಿಷ್ ಗೆಳೆಯ ಬರ್ನಾರ್ಡ್ 'ಪಾಸ್‌ಪೋರ್ಟ್ ಕೊಡು' ಅಂತ ಕೇಳ್ದ. ಅದು ಅವನ ಹತ್ತಿರವೇ ಇದ್ರೆ ಇನ್ನೂ ಸುರಕ್ಷಿತ ಅಂದ. ಆಮೇಲೆ ಗೃಹ ಮಂತ್ರಾಲಯಕ್ಕೆ ಹೋಗಿ ಅಲ್ಲಿ 'ಆಶ್ರಯಕ್ಕಾಗಿ ಬಂದಿದ್ದೇನೆ' ಎಂದು ಹೇಳ್ಬೇಕು ಅಂದ. ನಾನು ಪಾಸ್‌ಪೋರ್ಟ್ ಕೊಟ್ಟೆ ಅವ್ನಿಗೆ. ಅವ್ನು ವಿಳಾಸ ಬರೆದ ಒಂದು ಚಿಕ್ಕ ಹಾಳೆ ಕೊಟ್ಟ; ಗೃಹ ಮಂತ್ರಾಲಯ, ಲೂನಾರ್ ಹೌಸ್, ಮೊದಲನೆಯ ಮಹಡಿ, ನಲವತ್ತನೇ ವೆಲ್ಲಿಸ್ಲಿ ರಸ್ತೆ, ಕ್ರೋಯ್ಡೊನ್ CR9 2BY. ಕೆಲವೇ ಕ್ಷಣಗಳಲ್ಲಿ ಆತ ಅಲ್ಲಿಂದ ಮಾಯ ಆದ. ಇವತ್ತಿನವರೆಗೂ ನಾನು ಅವನ್ನ ಕಂಡಿಲ್ಲ.

ಅಷ್ಟು ಸುಲಭವಾಗಿ ನನ್ನ ಪಾಸ್‌ಪೋರ್ಟ್ ಯಾಕೆ ಕೊಟ್ಟೆ ಅಂತ ಗೊತ್ತಿಲ್ಲ. ಅವನ ಮೇಲೆ ಭರವಸೆ ಇತ್ತು. ತುಂಬಾ ಸಹಾಯ ಮಾಡಿದ್ದ ನೋಡಿ. ಮತ್ತೆ ಪಾಸ್‌ಪೋರ್ಟ್ ಯಾಕೆ ತಕೊಂಡ ಅಂತ್ಲೂ ಗೊತ್ತಿಲ್ಲ. ಬಹುಶಃ ನನ್ಗೆ ಸಹಾಯ ಮಾಡ್ಬೇಕು ಅನ್ನೋ ಒಳ್ಳೇ ಮನಸ್ಸಿಂದ್ಲೇ ಇರ್ಬೇಕು. ಅಥವಾ ತನ್ನನ್ನು ಕಾಪಾಡಿಕೊಳ್ಳೋಕೆ ಅಂತ್ಲೂ ಇರ್ಬಹುದು. ಯಾಕಂದ್ರೆ, ನನ್ನ ವೀಸಾ ಹೇಗೆ ಗಿಟ್ಟಿಸಿದ ಗೊತ್ತಿಲ್ಲ. ಬಹುಶಃ ಅದನ್ನ ಸರಿಯಾದ ದಾರೀಲಿ ಮಾಡಿರ್ಲಿಲ್ಲ. ಬಹುಶಃ ಅವನಿಗೆ ಯಾರು ಸಹಾಯ ಮಾಡಿದ್ರೋ ಅವ್ರನ್ನ ರಕ್ಷಿಸಲಿಕ್ಕೂ ಆಗಿರ್ಬಹುದು. ಅವನು ಗುಂಪಿನಲ್ಲಿ ಮಾಯ ಆದ ನಂತ್ರಾನೇ ಮತ್ತೆ ಇವನನ್ನು ಹೇಗೆ ಹುಡುಕೋದು ಅನ್ನೋ ವಿಚಾರ ಬಂದಿದ್ದು, ನನ್ನತ್ರ ಕಾಸಿರಲಿಲ್ಲ. ವಾರದ ಕೊನೆಯ ದಿನ ಅದು. ಕ್ರೋಯ್ಡೊನ್‌ನ ಗೃಹ ಮಂತ್ರಾಲಯ ಸೋಮವಾರ ಮುಂಜಾನೆ ತನಕ ತೆರೆಯೋದಿಲ್ಲ ಅಂತ ಗೊತ್ತಾಯ್ತು. ಅಲ್ಲೀವರೆಗೂ ಎಷ್ಟು ದೀರ್ಘ ಪ್ರಯಾಣದ ಮೇಲೆ ಹೊರಟಿದ್ದೆ ಅನ್ನೋ ಕಲ್ಪನೆ ಇರಲಿಲ್ಲ. ಮಂತ್ರಾಲಯದ ಕಾವಲುಗಾರ ರಾತ್ರಿ ಉಳಿಯೋಕೆ ಒಂದು ವಿಳಾಸ